ಮಂಗಳೂರಿನ ಬೆಸೆಂಟ್ ಪದವಿ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿರುವ ಗೌತಮ ಜ್ಯೋತ್ಸ್ನಾ ಅವರು ಕಥೆ ಮತ್ತು ಅನುವಾದ ಕ್ಷೇತ್ರಗಳ ಕುರಿತು ಆಸಕ್ತರು. ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ಅಧ್ಯಯನಬರಹಗಳನ್ನು ಬರೆದಿದ್ದಾರೆ. ಸ್ಟ್ಯಾನ್ಲಿ ಕ್ಯುಬ್ರಿಕ್ ಸಿನಿಮಾಗಳ ಕುರಿತು ಸಂಶೋಧನೆ ನಡೆಸಿದ್ದಾರೆ. ಮೂಲತಃ ಮೈಸೂರಿನವರಾದ ಅವರು ಪ್ರಸ್ತುತ ಮಂಗಳೂರು ನಿವಾಸಿ.

ಅಪ್ಪಿತಪ್ಪಿಯೂ ಎಲ್ಲೂ ಅಲ್ಲಾಡದೇ ಇಲ್ಲೇ ಬೀಡು ಬಿಟ್ಟು ಈ ಪುರಾತತ್ವ ಇಲಾಖೆಯ ಕೇರ್ ಟೇಕರ್ ಆಗಿದ್ದಾನಂತೆ.

ಈ ವಿಚಿತ್ರ ಜೀವಿಯ ಹೆಸರು ಹಯವದನ ರಾಯ. ಈ ಸರಕಾರಿ ಕಟ್ಟಡದ ಹಿಂಬದಿಯಲ್ಲಿ ಖಾಲಿ ಬಿದ್ದಿರುವ ರೂಮಿನಲ್ಲಿ ಉಳಿದುಕೊಳ್ಳಲು ಈತನಿಗೆ ಮೇಲೆ ಕೂತವರು ಅವಕಾಶ ಕೊಟ್ಟದ್ದರು. ಇವನದೇ ಸ್ವಂತ ಮನೆ ಇದ್ದರೂ ಈಗೀಗ ಈ ಮನುಷ್ಯನ ಠಿಕಾಣಿ ಇಲ್ಲೇ. ನಾನೇನು ಅಂತಾ ಹುಮ್ಮಸ್ಸು ತೋರಿಸದೇ ಇದ್ದರೂ ಇಷ್ಟೆಲ್ಲ ಒದರುತ್ತಿದ್ದುದನ್ನು ನೋಡಿ ಇದೊಂದು ಮತಿಕೆಟ್ಟ ಬುಡುಬುಡಿಕೆ ಮುದುಕ ಅಂತ ನನಗೆ ಖಾತ್ರಿಯಾಯಿತು. ಆದರೆ, ಆಗಲೇ ಹನ್ನೆರೆಡರ ಹೊತ್ತು, ಆ ಸುಡುಗಾಡ್ ಪರ್ವತನೇನಿಯ ಸಂಬಂಧಿಕನ ತಗಡು ಝೂ ಬಗ್ಗೆ ಎಂತ ಕರ್ಮ ಮಾಹಿತಿ ಸಂಗ್ರಹಿಸೋದು ಅಂತ ಇದ್ದಕ್ಕಿದ್ದಂತೆ ಆವರಿಸಿಕೊಂಡ ಗೊಡ್ಡು ಉದಾಸೀನದ ಸಿಟ್ಟಲ್ಲಿ, ನನಗೆ ಬೇರೆ ಏನೂ ಕಾರ್ಯ ತೋಚದೆ ಈ 'ಗಾಂಧಿ ತಾತ'ನ ಜೊತೆ ಹರಟೆ ಹೊಡೆಯುವ ಮನಸ್ಸಾಯಿತು. ಇತ್ತೀಚಿನ ದಿನಗಳಲ್ಲಿ ಆಗುತ್ತಾ ಇರುವ ಆರ್ಕಿಯಾಲಜಿಕಲ್ ಸರ್ವೆಗಳ ಬಗ್ಗೆ ಕೇಳಿದೆ. 'ರಾಜ್ಯದಲ್ಲಿ ಇರೋ ಮಾನ್ಯುಮೆಂಟ್ಸನ್ನೆಲ್ಲ ಪ್ರೊಟೆಕ್ಟ್ ಮಾಡಲಿಕ್ಕೆ ಈಗ ನಮ್ಮ ಡಿಪಾರ್ಟ್‌ಮೆಂಟ್‌ನವರು ಪ್ಲಾನ್ ಮಾಡಿದ್ದಾರೆ... ಎಷ್ಟೋ ದೇವಸ್ಥಾನ ವೀರಗಲ್ಲು ಹಾಗೇ ನಮ್ಮ ಕಾರ್ಕಳದ ಬಸದಿಗಳಲ್ಲಿ ಸಿಕ್ಕಿದ್ದ ಶಿಲಾಸನಗಳು ಇವನ್ನೆಲ್ಲ ಡಾಕ್ಯುಮೆಂಟ್ ಮಾಡೋ ಕೆಲಸ ಆಗ್ತಾ ಇದೆ... ಒಟ್ಟು 862 ಮುಖ್ಯವಾದ ಸ್ಮಾರಕ ಶಿಲೆಗಳು ಇನ್ನೂ ದಾಖಲೆ ಆಗಬೇಕಿದೆ ನೋಡಿ...' ಅಂದ. ಇದ್ಯಾಕೋ ತುಂಬಾ ಏಕತಾನತೆಯ ವಿಷಯಗಳಾಗಿ ನನಗೆ ಕಂಡು, ಹಠಾತ್ತಾಗಿ ಇಲ್ಲಿಗೆ ನಾನು ಬರಲು ಪ್ರೇರಕವಾಗಿದ್ದ ಮುಖ್ಯ ವಿಷಯವನ್ನೇ ಮರೆತಿದ್ದ ನೆನಪಾಗಿ, ಕುಡಿಯುವುದು ಅತಿಯಾಗಿ ನನ್ನ ಜ್ಞಾಪಕಶಕ್ತಿಯ ನರಗಳೇ ಕುಸಿಯುತ್ತಿವೆ, ಸ್ವಲ್ಪ ನಾನು ಜಾಗೂರಕನಾಗಿರಬೇಕು ಎಂದು ಮತ್ತೊಮ್ಮೆ ನನಗೆ ನಾನೇ ವಾರ್ನಿಂಗ್ ಕೊಟ್ಟು,

'ಹೇ... ಅಲ್ಲಾ... ನಿಮ್ಮ ಯುನಿಟ್ ಆಫೀಸರ್ ಇದ್ರಲ್ಲ... ಬಲರಾಮ್ ನಾಯ್ಡು, ಏನ್ ಕೇಸ್ ಅವ್ರದ್ದು... ನಾಪತ್ತೆ ಅಂದ್ರೆ...' ಅಂದೆ. ಕಣ್ಣುಗಳನ್ನು ಹಾಗೇ ಮೊನಚುಗೊಳಿಸಿ ನನ್ನನ್ನು ಅಭ್ಯಸಿಸಿದ ಹಯವದನ, ಹಾಗೇ ನನ್ನತ್ತ ವಾಲಿ ಪಿಸುಗುಟ್ಟಿದ್ದ,

'ನೀವು ಪೇಪರ್‌ನ ಜನಾ ಅಲ್ಲ... ಲೋಕಲ್ ಪೇಪರ್...'

ತರ್ಲೆ ಮುದುಕ ಇವ್ನು ಅಂತ ಲೆಕ್ಕ ಹಾಕಿ 'ಹೇಗ್ರಿ ಗೊತ್ತಾಯಿತು' ಅಂದೆ.

'ನಿಮ್ಮ ಮುಖ ನೋಡಿದ್ರೇ ಗೊತ್ತಾಗುತ್ತೆ... ಮತ್ತೆ ಬಿ.ಎಸ್ಪಿ ಗ್ರೇ ಪರಿಮಳ ಬರ್ತಾ ಉಂಟಲ್ಲ...'

'ಹೋ! ಬಿಎಸ್ಪಿ ಗ್ರೇ ವಾಸ್ನೆ ಇದ್ರೆ ಲೋಕಲ್ ನ್ಯೂಸ್ ಅಂತಾನ... ಏನ್ ವಾದ ರೀ ನಿಮ್ದು... ಇಷ್ಟೊ ಶಾರ್ಪ್ ನಿಮ್ಮ ಮೂಗ್ ಅಂದ್ರೇ ನಿಮ್ಗೆ ತುಂಬಾ ಎಕ್ಸ್‌ಪೀರಿಯನ್ಸಿದೆ ಅನ್ಸುತ್ತೆ ಎಣ್ಣೆ ಹಾಕೀ...' ಅಂತ ಹಾಗೇ ನನ್ನ ಹಿಂದೆ ಇದ್ದ ಕಂಬಕ್ಕೆ ಒರಗಿದೆ. ಖಾಲಿ ಕೂತು ಬಾರಲ್ಲಿ ಪೆಗ್ ಮೇಲೆ ಪೆಗ್ ಏರಿಸುತ್ತಾ ಇರೋ ಒಬ್ಬಂಟಿ ಕುಡುಕನಿಗೆ ಕಾಡಹರಟೆ ಹೊಡೆದು ಕಾಲಹರಣ ಮಾಡಲು ಇನ್ನೊಂದು ಟೇಬಲ್‌ನಲ್ಲಿದ್ದ ಮಾತಿನ ಮಹಾಶಯನ ಪುಕ್ಕಟ್ಟೆ ಸಾಥು ಕೊಟ್ಟಂತೆ ಆತ, 'ತುಂಬಾ ಇತ್ತು ಸ್ವಾಮಿ ಮೊದಲು. ಈಗ ಬಿಟ್ಟಿದ್ದೇನೆ... ಬುದ್ಧಿ ಶಾರ್ಪ್ ಇರ್ಬೇಕಲ್ಲ... ಇಲ್ಲಾ ಅಂದ್ರೆ... (ಮತ್ತೆ ತನ್ನ ದನಿ ತಗ್ಗಿಸಿ ಗುಟ್ಟು ಹೇಳುವಂತೆ) ಹೊಸ ಡೆವಲಪ್‌ಮೆಂಟುಗಳು ಗೊತ್ತಾಗಲ್ಲ...' ಅಂದ.

'ಅಲ್ಲಾ ಸ್ವಾಮೀ, ನಾನ್ ಕೇಳಿದ್ದು ಬಲರಾಮ್ ನಾಯ್ಡೂ...' ನನ್ನ ವಾಕ್ಯ ಮುಗಿಯುವ ಮುನ್ನ ಬಾಯಿ ಹಾಕಿದ ಆತ, 'ಆ ವಿಷಯಕ್ಕೂ ನಾನ್ ಕುಡಿಯದೇ ಇರೋದಕ್ಕೆ ಕನೆಕ್ಷನ್ ಉಂಟು ಮಾರ್ರೇ...' ಅಂದ.